ವಿಶಾಖ ಎನ್.

# ಹೊಸಗನ್ನಡದ ಗೇಲಿಯ ಸೂಜಿಮೊನೆ



दानिष्

ಆಧುನಿಕ ಜಗತ್ತಿನ ಜಾನಪದವಾಗಿರುವ ಸಿನಿಮಾ ಹಲಬಗೆಯಲ್ಲಿ ನೋಡುಗರನ್ನು ಕಾಡುತ್ತ, ಪರವಶಗೊಳಿಸುತ್ತ ಬಂದಿದೆ. ವಿಶಿಷ್ಟ ಸಿನಿಮಾಗಳ ಮಾಂತ್ರಿಕತೆಯನ್ನು ಚಿತ್ರರಸಿಕರಿಗೆ ಇಲ್ಲಿ ಪರಿಚಯಿಸಲಾಗುತ್ತದೆ. ಚಿತ್ತದ ಬೆಳ್ಳಿತೆರೆಯಲ್ಲಿ ದಾಖಲಾದ, ಮನಸ್ಸನ್ನು ಸೂರೆಗೊಂಡ ಅನನ್ಯ ಸಿನಿಮಾ ಒಂದರ ಚಿತ್ರಕ ಬರವಣಿಗೆ ಇಲ್ಲಿದೆ

ಪೀಠಿಕೆಯಾಗಿ ಇಬ್ಬರು ಹಿರಿಯರ ಮಾತುಗಳು ನೆನಪಾಗುತ್ತಿವೆ. ಮೊದಲನೆಯದು, ನಿಘಂಟು ತಜ್ಞ ಜಿ. ವೆಂಕಟಸುಬ್ಬಯ್ಯ ಹೇಳಿದ್ದು: 'ನಮ್ಮ ಭಾಷೆಗೆ ಏನೇನೋ ಸೇರಿಕೊಳ್ಳುತ್ತಿದೆ. ಏನೇನೋ ಆಗುತ್ತಿದೆ. ನಮ್ಮ ಕಾಲದಲ್ಲಿ ಸಖತ್ ಎನ್ನುವುದಕ್ಕೆ ಪಾಸಿಟಿವ್ ಅರ್ಥ ಇರಲಿಲ್ಲ. ಸಖತ್ ಜ್ವರ ಬಂದಿದೆ ಎನ್ನುತ್ತಿದ್ದೆವು. ಈಗ ಎಲ್ಲದಕ್ಕೂ ಸಖತ್ತಾಗಿದೆ ಎಂದು ಹೇಳಲಾರಂಭಿಸಿದ್ದಾರೆ. ಯಾರಾದರೂ ಇದು ಸರಿ, ಇದು ತಪ್ಪು ಎಂದು ಸ್ಪಷ್ಟಪಡಿಸುವ ಅಗತ್ಯವಿದೆ. ಮಾಧ್ಯಮಗಳ ಜವಾಬ್ದಾರಿ ಇದರಲ್ಲಿ ತುಂಬಾ ಮುಖ್ಯ.'

ಎರಡನೆಯದು, ಕಥೆಗಾರ ಎಸ್. ದಿವಾಕರ್ ಸಖೇದಾಶ್ಚರ್ಯದ ಭಾವದಿಂದ ಬೇಸರಿಸಿದ್ದು: 'ಇದೇನ್ರೀ... ಜನರ ಕುರಿಗಳನ್ನು ಮಾಡುವ ಕಾರ್ಯಕ್ರಮಗಳು ಬರುತ್ತಿವೆ. ಅದನ್ನು ಜನ ಕಣ್ಣು